ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 130
ಸದಸ್ಯರ ಹೆಸರು : ಶ್ರೀ ಎನ್ ಎಸ್ ಬೋಸರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 02.03.2020
ಉತ್ತರಿಸುವವರು : ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಇರುವ ಒಟ್ಟು ಶೇಕಡವಾರು ಅರಣ್ಯ ಪ್ರದೇಶ ಎಷ್ಟು;</td><td>ರಾಜ್ಯದಲ್ಲಿ ಒಟ್ಟು ಶೇ.22.00ರಷ್ಟು ಅರಣ್ಯ ಪ್ರದೇಶ ಇರುತ್ತದೆ.</td></tr>
<tr><td>ಆ)</td><td>ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಇರುವ ಶೇಕಡವಾರು ಒಟ್ಟು ಅರಣ್ಯ ಪ್ರದೇಶ ಎಷ್ಟು;</td><td>ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಇರುವ ಶೇಕಡವಾರು ಅರಣ್ಯ ಪ್ರದೇಶದ ವಿವರ ಈ ಕೆಳಕಂಡಂತಿದೆ
<table>
<tr><th>ಕ್ರಮ ಸಂ.</th><th>ಅರಣ್ಯ ವಿಭಾಗ</th><th>ಅರಣ್ಯ ವಿಸ್ತೀರ್ಣ (ಚ.ಕಿ.ಮೀ ಗಳಲ್ಲಿ)</th><th>ಒಟ್ಟು ಭೂಪ್ರದೇಶದಲ್ಲಿರುವ ಶೇಕಡವಾರು ಅರಣ್ಯ ಪ್ರದೇಶ</th></tr>
<tr><td>1</td><td>ಕಲಬುರಗಿ</td><td>359.7800</td><td>3.270</td></tr>
<tr><td>2</td><td>ಯಾದಗಿರಿ</td><td>489.0577</td><td>5.300</td></tr>
<tr><td>3</td><td>ರಾಯಚೂರು</td><td>351.4852</td><td>4.190</td></tr>
<tr><td>4</td><td>ಬೀದರ್</td><td>332.2554</td><td>8.040</td></tr>
<tr><td></td><td>ಒಟ್ಟು</td><td>1532.5783</td><td>4.630</td></tr>
</table></td></tr>
<tr><td>ಇ)</td><td>ರಾಯಚೂರು ಜಿಲ್ಲೆಯಲ್ಲಿರುವ ಒಟ್ಟು ಶೇಕಡವಾರು ಅರಣ್ಯ ಪ್ರದೇಶ ಎಷ್ಟು;</td><td>ರಾಯಚೂರು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 8,38,600 ಹೆಕ್ಟರ್ ಇದ್ದು, 35,148.52 ಹೆಕ್ಟರ್ ಅರಣ್ಯ ಪ್ರದೇಶವಿರುತ್ತದೆ. ಒಟ್ಟು ಭೂಪ್ರದೇಶದ ಶೇ.4.19 ರಷ್ಟು ಅರಣ್ಯ ಪ್ರದೇಶ ಇರುತ್ತದೆ.</td></tr>
<tr><td>ಈ)</td><td>ರಾಯಚೂರು ಜಿಲ್ಲೆಯಲ್ಲಿ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಪ್ರದೇಶವನ್ನು ಬೆಳೆಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?</td><td>ಭಾರತೀಯ ಅರಣ್ಯ ಸಮೀಕ್ಷೆ, 2019ರ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ 2017 ರಿಂದ 2019ರ ಅವಧಿಯಲ್ಲಿ ಅರಣ್ಯ ಹೊದಿಕೆ 23 ಚದರ ಕಿ.ಮೀ ಹೆಚ್ಚಾಗಿರುತ್ತದೆ.

2019-20ನೇ ಸಾಲಿನಲ್ಲಿ ಅರಣ್ಯ ಪ್ರದೇಶ, ಸಂಸ್ಥೆಗಳ ಆವರಣ, ರಸ್ತೆ ಬದಿ, ನಗರ/ಪಟ್ಟಣ ಪ್ರದೇಶಗಳ ಒಟ್ಟು 1254.00 ಹೆಕ್ಟರ್ ಪ್ರದೇಶದಲ್ಲಿ ನೆಡುತೋಪು ಬೆಳೆಸಲಾಗಿದೆ. ಸಾರ್ವಜನಿಕರಿಗೆ ಒಟ್ಟು 4.025 ಲಕ್ಷ ಸಸಿಗಳನ್ನು ವಿತರಿಸಲಾಗಿದೆ. 2020-21ನೇ ಸಾಲಿನಲ್ಲಿ ಒಟ್ಟು 747.00 ಹೆಕ್ಟರ್ ಪ್ರದೇಶದಲ್ಲಿ ನೆಡುತೋಪು ಬೆಳೆಸುವ ಹಾಗೂ 4.46 ಲಕ್ಷ ಸಸಿಗಳನ್ನು ವಿತರಿಸುವ ಗುರಿ ಹೊಂದಲಾಗಿದೆ. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿಯಲ್ಲಿ ರೈತರಿಗೆ ಪ್ರೋತ್ಸಾಹಧನ ನೀಡಿ ಅರಣ್ಯೀಕರಣಕ್ಕೆ ಉತ್ತೇಜನ ನೀಡಲಾಗುತ್ತಿದೆ.</td></tr>
</table>

		ರಾಯಚೂರು ಜಿಲ್ಲೆಯಲ್ಲಿ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಪ್ರದೇಶವನ್ನು ಬೆಳೆಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ. 1) ಅರಣ್ಯ ಹೊದಿಕೆ ಮತ್ತು ವೃಕ್ಷ ಕವಚವನ್ನು ಹೆಚ್ಚಿಸುವ ಸಲುವಾಗಿ ಅರಣ್ಯೀಕರಣ ಕಾಮಗಾರಿಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಸದರಿ ಯೋಜನೆಯಡಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಮಾಡಲಾಗುತ್ತಿದೆ. 2) ವನಮಹೋತ್ಸವ ಕಾರ್ಯಕ್ರಮದಡಿ ಶಾಲಾ ಕಾಲೇಜುಗಳು, ಸರ್ಕಾರಿ ಕಚೇರಿಗಳ ಆವರಣದಲ್ಲಿ ಮತ್ತು ಸಂಘ ಸಂಸ್ಥೆಗಳ ಜಮೀನುಗಳಲ್ಲಿ ಸಸಿಗಳನ್ನು ನೆಡುವುದು ಮತ್ತು ಶಾಲೆ-ಕಾಲೇಜು ವಿದ್ಯಾರ್ಥಿಗಳು, ಸರ್ಕಾರೇತರ ಸಂಘ-ಸಂಸ್ಥೆ ಹಾಗೂ ಸಾರ್ವಜನಿಕರುಗಳ ಸಹಭಾಗಿತ್ವದಲ್ಲಿ ಸೂಕ್ತ ಸ್ಥಳಗಳಲ್ಲಿ ಬೀಜ/ಬೀಜದುಂಡೆಗಳನ್ನು ಬಿತ್ತನೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಅರಣ್ಯದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. 3)ರಸ್ತೆಯ ಇಕ್ಕೆಲಗಳಲ್ಲಿ ನೆಡುತೋಪು ಬೆಳೆಸುವ ಮೂಲಕ ಸಾರ್ವಜನಿಕರಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ನೆರಳು ಒದಗಿಸಲಾಗುತ್ತಿದೆ. ಅಲ್ಲದೆ, ನೈಸರ್ಗಿಕ ಸಮತೋಲನವನ್ನು ಕಾಪಾಡಲಾಗುತ್ತಿದೆ. 4)ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಗರ/ಮುನಿಸಿಪಲ್/ಪಟ್ಟಣ ಪಂಚಾಯತ್ ಪ್ರದೇಶಗಳಲ್ಲಿ ಎತ್ತರವಾದ ಸಸಿಗಳನ್ನು ನೆಡಲಾಗುತ್ತಿದೆ. 5) ರೈತರಿಗೆ/ಸಾರ್ವಜನಿಕರಿಗೆ/ಸಂಘ-ಸಂಸ್ಥೆಗಳಿಗೆ ಹೆಚ್ಚು ಹೆಚ್ಚು ಸಸಿಗಳನ್ನು ಬೆಳಸಲು ಉತ್ತೇಜಿಸುವ ಸಲುವಾಗಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ರಿಯಾಯ್ತಿ ದರಗಳಲ್ಲಿ ಸಸಿಗಳನ್ನು ನೀಡಿ ಮೂರು ವರ್ಷಗಳಲ್ಲಿ ಬದುಕುಳಿದ ಪ್ರತಿ ಸಸಿಗೆ ರೂ.125/-ರಂತೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

ಸಂಖ್ಯೆ: ಅಪಜೀ 18 ಎಫ್‌ಎಎಫ್ 2020

29/02/2020

(ಆನಂದ್ ಸಿಂಗ್)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು